**ದಿನಾಂಕಃ 29.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನಗೆ ಕನ್ನಡ ಬರುತ್ತದೆ, ಆಂಗ್ಲ ಭಾಷೆ ಸ್ವಲ್ಪ ಮಟ್ಟಿಗೆ ಬರುತ್ತದೆ. ನನ್ನ ಹೆಸರು ಕೆ. ಮಂಜುನಾಥ್. ನಿಮ್ಮ ಹೆಸರನ್ನು ಮಂಜುನಾಥ ಗೌಡ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ನನ್ನ ಹೆಸರು ಕೆ. ಮಂಜುನಾಥ್ ಎಂಬುದಾಗಿರುತ್ತದೆ ಎಂದು ನುಡಿಯುತ್ತಾರೆ. ಲಕ್ಷ್ಮಿ ನರಸಿಂಹಸ್ವಾಮಿ ಎಂಟರ್‌ಪ್ರೈಸಸ್ ನನ್ನದಾಗಿರುತ್ತದೆ. ನಾನು ಅದರ ಪ್ರೊಪ್ರೈಟರ್ ಆಗಿರುತ್ತೇನೆ. ಈಗಲೂ ಸಹ ಲಕ್ಷ್ಮಿ ನರಸಿಂಹಸ್ವಾಮಿ ಎಂಟರ್‌ಪ್ರೈಸಸ್ ನ ಪ್ರೊಪ್ರೈಟರ್ ಆಗಿರುತ್ತೇನೆ. ಲಕ್ಷ್ಮಿ ನರಸಿಂಹಸ್ವಾಮಿ ಎಂಟರ್‌ಪ್ರೈಸಸ್ proprietorship ಆಗಿರುತ್ತದೆ.

**2.** ಆರೋಪಿ 2016 ರಿಂದ ಪರಿಚಯವಾಗಿರುತ್ತಾರೆ. ಆರೋಪಿಯು ವಿವಿಧ ಇಲಾಖೆಗಳಿಂದ ಅಗತ್ಯವಿರುವ ದಾಖಲೆಗಳು ಅಂದರೆ ಬಿಬಿಎಂಪಿ ಯಿಂದ ನಕ್ಷೆ, ನಿರಪೇಕ್ಷಣಾ ಪತ್ರ ಮತ್ತು ಖಾತಾ ಇನ್ನಿತರೆ ದಾಖಲೆಗಳನ್ನು ಪಡೆದುಕೊಳ್ಳುವ ಕೆಲಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಆರೋಪಿಯು ನನ್ನ ಸಹಾಯ ಪಡೆದುಕೊಳ್ಳುತ್ತಿದ್ದರು. ಆ ಕಾರಣ ಆರೋಪಿ ನನಗೆ ಪರಿಚಯವಾದರು. ಆರೋಪಿಯು ಗ್ರೂಪ್ ಅಫ್ ಕಂಪನಿಯಲ್ಲಿ ಅಂದರೆ Innovation investment Pvt. Ltd., Organic World, Tamra liesure Pvt. Ltd ಇನ್ನು 7-8 ಕಂಪನಿಗಳ ಜೊತೆ ಆರೋಪಿ ಕೆಲಸ ನಿರ್ವಹಿಸುತ್ತಿದ್ದರು. ಆ ಕಂಪನಿಗಳ ಹೆಸರು ಈಗ ನನಗೆ ನೆನಪಿರುವುದಿಲ್ಲ. ನನಗೂ ಮತ್ತು ಆ ಕಂಪನಿಗಳ ಜೊತೆ ನೇರ ಸಂಪರ್ಕವಿರುವುದಿಲ್ಲ, ಆರೋಪಿಯ ಮುಖಾಂತರ ವ್ಯವಹರಿಸಿರುತ್ತೇನೆ. ಮೇಲ್ಕಂಡ ಕಂಪನಿಯವರು ನನಗೆ ಇನ್ನು ಸುಮಾರು 45 ಲಕ್ಷ ರೂ. ಗಳು ಹಣವನ್ನು ಬಾಕಿ

ಉಳಿಸಿಕೊಂಡಿರುತ್ತಾರೆ. ಯಾವ ಯಾವ ಕಂಪನಿಗಳು ಎಷ್ಟು ಎಷ್ಟು ಮೊತ್ತ ಬಾಕಿ ಉಳಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಒಂದು ಕಂಪನಿಯಿಂದ ಸುಮಾರು ಮೂರುವರೆಯಿಂದ ಐದುವರೆ ಲಕ್ಷ ಗಳವರೆಗೆ ಬಾಕಿ ಹಣ ನನಗೆ ಬರಬೇಕಾಗಿರುತ್ತದೆ. ನಾನು ಮೇಲೆ ಹೇಳಿದ ಸುಮಾರು 45 ಲಕ್ಷ ರೂ.ಗಳು ನನ್ನ ಲಕ್ಷ್ಮಿ ನರಸಿಂಹಸ್ವಾಮಿ ಎಂಟರ್‌ಪ್ರೈಸಸ್ ಗೆ ಬರಬೇಕಾದ ಹಣವಾಗಿರುತ್ತದೆ. ಮೇಲೆ ಹೇಳಿದ ಲಕ್ಷ್ಮಿ ನರಸಿಂಹಸ್ವಾಮಿ ಎಂಟರ್‌ಪ್ರೈಸಸ್ ನ ಕೆಲಸವು ಇ.ಸಿ, ನಕ್ಷೆ, ನಿರಪೇಕ್ಷಣಾ ಪತ್ರಗಳು ಮತ್ತು ಇತರೆ ದಾಖಲೆಗಳನ್ನು ವಿವಿಧ ಇಲಾಖೆಗಳಿಂದ ಪಡೆದುಕೊಂಡು ಸಂಬಂಧಪಟ್ಟವರಿಗೆ ನೀಡುವಂತಹ ಕೆಲಸವಾಗಿರುತ್ತದೆ. ನಮ್ಮ ಸಂಸ್ಥೆಯಿಂದ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುವುದಿಲ್ಲ. ನಮ್ಮ ಸಂಸ್ಥೆ ನೊಂದಣಿಯಾಗಿರುತ್ತದೆ. ನಮ್ಮ ಸಂಸ್ಥೆ ಯಾವ ಕಚೇರಿಯ ಮುಖಾಂತರ ನೊಂದಣಿಯಾಗಿದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಿ ನರಸಿಂಹಸ್ವಾಮಿ ಎಂಟರ್‌ಪ್ರೈಸಸ್‌ನ ಲೆಕ್ಕ ಪತ್ರಗಳನ್ನು ನಾನೇ ನಿರ್ವಹಿಸುತ್ತಿದ್ದೆನು. ಅದನ್ನು ಆಡಿಟರ್ ಮುಖಾಂತರ ಪರಿಶೀಲಿಸಿಕೊಂಡಿರುತ್ತೇನೆ. ನಮ್ಮ ಎಂಟರ್‌ಪ್ರೈಸಸ್‌ನಲ್ಲಿ ಪ್ರತಿಯೊಂದು ವ್ಯವಹಾರದ ಬಗ್ಗೆ ದಾಖಲೆಗಳಿವೆ.

**3.** ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ಅದರ ದಾಖಲೆಗಳು ನನ್ನ ಬಳಿ ಇವೆ. ಆರೋಪಿಗೆ ನಾನು ಕೆಲವು ಬಾರಿ ವೈಯಕ್ತಿಕವಾಗಿ ಹಾಗೂ ನಮ್ಮ ಎಂಟರ್‌ಪ್ರೈಸಸ್ ಪರವಾಗಿ ಕೆಲಸವನ್ನು ಮಾಡಿಕೊಟ್ಟಿದ್ದೇನೆ. ಆರೋಪಿ ತ್ಯಾಗರಾಜುರವರಿಗೆ ನೀವು ವೈಯಕ್ತಿಕವಾಗಿ ಕೆಲಸ ನಿರ್ವಹಿಸಿಕೊಟ್ಟಿದ್ದೀರಾ ಎಂರದೆ ಸರಿ. ಆರೋಪಿಯು ಕಾರ್ಯ ನಿರ್ವಹಿಸುತ್ತಿದ್ದ ಕಂಪನಿಗಳಿಗೆ ನೀವು ನೇರವಾಗಿ ಕೆಲಸ ಮಾಡಿಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನಾನು ಆರೋಪಿಯ ಮುಖಾಂತರ ಕೆಲಸ ಮಾಡಿಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಆ ಕಂಪನಿಗಳಿಗೆ

ನಾನು ನೇರವಾಗಿ ಕೆಲಸವನ್ನು ಮಾಡಿಕೊಟ್ಟಿಲ್ಲ. ನಿಮಗೂ ಮತ್ತು ಆರೋಪಿಗೆ ಲಿಖಿತವಾಗಿ ಒಪ್ಪಂದವಾಗಿತ್ತೆ ಎಂದರೆ ಸಾಕ್ಷಿಯು 2016 ರಲ್ಲಿ ನಮ್ಮ ನಡುವೆ ಮೌಖಿಕ ಒಪ್ಪಂದವಾಗಿತ್ತು ಎಂದು ನುಡಿಯುತ್ತಾರೆ. ನಮ್ಮ ನಡುವೆ ಲಿಖಿತ ಒಪ್ಪಂದವಾಗಿರುವುದಿಲ್ಲ. ಬಾಯಿ ಮಾತಿನ ಒಪ್ಪಂದವನ್ನು ನಮ್ಮ ಸಂಸ್ಥೆಯಲ್ಲಾಗಲೀ ಅಥವಾ ನನ್ನ ವೈಯಕ್ತಿಕವಾಗಲೀ ಯಾವ ದಾಖಲೆಯಲ್ಲು ನಮೂದಿಸಿಲ್ಲ ಎಂದರೆ ಸರಿ. ಸರ್ಕಾರಿ ಸಂಸ್ಥೆಗಳಾದ BBMP, BDA, BWSSB, BESCOM ಇನ್ನಿತರೆ ಸರ್ಕಾರಿ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳಲ್ಲಿ ನಿಮಗೆ ತೆಗೆದುಕೊಳ್ಳಲು ಸಾಧ್ಯವಾಗದ ದಾಖಲೆಗಳನ್ನು ನಾನು ತೆಗೆದುಕೊಡುತ್ತೇನೆ ಎಂದು ನನ್ನ ಮತ್ತು ಆರೋಪಿಯ ನಡುವೆ 2016 ರಲ್ಲಿ ಮೌಖಿಕ ಒಪ್ಪಂದವಾಗಿರುತ್ತದೆ. ನಾನು ಸಲ್ಲಿಸುವ ಸೇವೆಗೆ ಆರೋಪಿಯು ಹಣ/ಪ್ರತಿಫಲ ನೀಡುವಂತೆ ಒಪ್ಪಂದವಾಗಿರುತ್ತದೆ. ಕೆಲಸ ಮಾಡುವ ಮೊದಲೇ ಶೇಕಡ 40 ರಷ್ಟು ಹಣ ನೀಡಬೇಕು ಮತ್ತು ಕೆಲಸ ನಿರ್ವಹಿಸಿ ಕೊಟ್ಟ ನಂತರ ಉಳಿಕೆ ಶೇಕಡ 60 ರಷ್ಟು ಹಣವನ್ನು ನೀಡುವಂತೆ ಒಪ್ಪಂದವಾಗಿತ್ತು. ಕೆಲಸಕ್ಕೆ ತಗಲುವಂತಹ ವೆಚ್ಚವನ್ನು ಆರೋಪಿಗೆ ನಿಗದಿಪಡಿಸುತ್ತಿದ್ದರು. ಅವರು ನಿಗದಿಪಡಿಸುತ್ತಿದ್ದ ವೆಚ್ಚಕ್ಕೆ ನನ್ನ ಸಮ್ಮತಿ ಇರುತ್ತಿತ್ತು. 2016 ರ ಅಕ್ಟೋಬರ್ ಮಾಹೆಯಲ್ಲಿ ನನ್ನ ಹಾಗೂ ಆರೋಪಿಯ ವ್ಯವಹಾರ ಪ್ರಾರಂಭವಾಗಿರುತ್ತದೆ. ಆಯಾ ವರ್ಷದಲ್ಲಿ ಆರೋಪಿ ಎಷ್ಟು ಕೆಲಸವನ್ನು ನನಗೆ ನಿರ್ವಹಿಸಿದ್ದು ಅದರಲ್ಲಿ ಎಷ್ಟು ಕೆಲಸವನ್ನು ನಾನು ಪೂರ್ಣಗೊಳಿಸಿದ್ದೇನೆ ಎಂಬ ಬಗ್ಗೆ ದಾಖಲೆಗಳನ್ನು ಇಟ್ಟಿದ್ದೇನೆ. ನನ್ನ ಹಾಗೂ ಆರೋಪಿಯ ಮೌಖಿಕ ಒಪ್ಪಂದ ಡಿಸೆಂಬರ್ 2023 ರಲ್ಲಿ ಅಂತ್ಯಗೊಂಡಿರುತ್ತದೆ. ನನ್ನ ಹಾಗೂ ಆರೋಪಿಯ ವ್ಯವಹಾರವು ಅಂತ್ಯಗೊಳ್ಳುವವರೆಗೂ ನನ್ನ ಹಾಗೂ ಅವರ ವ್ಯವಹಾರದ ಬಗ್ಗೆ ನನ್ನ ಕೈಯಲ್ಲಿ ಸಾಧ್ಯವಾದಷ್ಟು ಲೆಕ್ಕ ಪತ್ರಗಳನ್ನು ಇಟ್ಟುಕೊಂಡಿರುತ್ತೇನೆ. ಆ ದಾಖಲೆ ಪತ್ರಗಳನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಸಾಕ್ಷಿಯು ಅವುಗಳನ್ನು ನನ್ನ ಮಾಹಿತಿಗಾಗಿ ಕಚ್ಛಾ

ದಾಖಲೆಯಾಗಿ ಬರೆದುಕೊಂಡಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.